**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಅಸಲು ದಾವೆ ನಂ.**315/2016**

**ದಿನಾಂಕಃ 21-08-2024,** ಪಿ **ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಎನ್ ಕೆ ವಕೀಲರಿಂದಃ

ನಾನು ಓದಿಲ್ಲ. ಸರ್ವೆ ನಂ.45/2ಬಿ ಜಮೀನಿಗಾಗಿ ಈ ದಾವೆಯನ್ನು ಹೂಡಿದ್ದೇನೆ. ಸದರಿ ಜಮೀನು 28ವರೆ ಗುಂಟೆ ಜಮೀನು ಇದೆ. ನಾನು 28 ವರೆ ಗುಂಟೆ ಜಮೀನಿಗೆ ಈ ದಾವೆಯನ್ನು ಹೂಡಿದ್ದೇನೆ. ಸರ್ವೆ ನಂ.45/2ಬಿ ಜಮೀನಿನ ಪಹಣಿಯಲ್ಲಿ 25 ಗುಂಟೆ ಜಮೀನು ಇದೆ, ಪತ್ರದಲ್ಲಿ 28ವರೆ ಗುಂಟೆ ಜಮೀನುಇದೆ. ಉಳಿಕೆ 3ವರೆ ಗುಂಟೆ ಜಮೀನು ಸರ್ವೆ ನಂ.45/2ಎ ರಲ್ಲಿ ಉಳಿದುಕೊಂಡಿದೆ. ಸರ್ವೆ ನಂ.45/2ಎ ಜಮೀನು ಗೋವಿಂದಯ್ಯ ರವರ ಹೆಸರನಲ್ಲಿದೆ. ಸದರಿ ಗೋವಿಂದಯ್ಯ ರವರ ತಂದೆಯ ಹೆಸರು ದೇಸಿ.

ಸರ್ವೆ ನಂ.45/2ಎ ರಲ್ಲಿ 2 ಎಕರೆ 9 ಗುಂಟೆ ಜಮೀನು, ಸರ್ವೆ ನಂ.45/2ಬಿ ರಲ್ಲಿ 25 ಗುಂಟೆ ಜಮೀನು ಮತ್ತು ಸರ್ವೆ ನಂ.45/4 ರಲ್ಲಿ 10 ಗುಂಟೆ ಜಮೀನು ಇದೆ. ಸದರಿ ಜಮೀನುಗಳು ನಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ತಾತನ ತಾತನ ಹೆಸರು ದೇಸಿ. ಸದರಿ ದೇಸಿ ರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಸದರೆ ದೇಸಿ ಯವರಿಗೆ ಇಬ್ಬರು ಮಕ್ಕಳು, ಅವರ ಪೈಕಿ ಮೊದಲನೇ ಮಗ ಅಣ್ಣೇಗೌಡ ಮತ್ತು ಎರಡನೆಯ ಮಗ ಗೋವಿಂದಯ್ಯ.

ಅಣ್ಣೇಗೌಡರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಗೋವಿಂದಯ್ಯ ರವರ ಹೆಂಡತಿಯ ಹೆಸರು ಚಿಕ್ಕಹೊನ್ನಮ್ಮ. ಅಣ್ಣೇಗೌಡರಿಗೆ ಒಬ್ಬನೇ ಮಗ, ಅವರೆಂದರೆ ಜವರೇಗೌಡ. ಗೋವಿಂದಯ್ಯ ರವರಿಗೆ ಇಬ್ಬರು ಮಕ್ಕಳು, ಅವರೆಂದರೆ ಜವರೇಗೌಡ ಮತ್ತು ವೆಂಕಟರಾಮು. ಅಣ್ಣೇಗೌಡರ ಮಗ ಜವರೇಗೌಡರ ಹೆಂಡತಿಯ ಹೆಸರು ನಿಂಗಮ್ಮ. ನಿಂಗಮ್ಮನವರನ್ನು ಪೇಟೆ

ಕುರುಬಗೇರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಜವರೇಗೌಡ ಮತ್ತು ನಿಂಗಮ್ಮ ರವರಿಗೆ ಇಬ್ಬರು ಮಕ್ಕಳು, ಅವರ ಪೈಕಿ ಮೊದಲನೆಯವರು ಲಕ್ಷ್ಮಮ್ಮ ಮತ್ತು ಎರಡನೆಯವರು ರೇಣುಕಮ್ಮ ಎಂದರೆ ಸರಿ.

ದೇಸಿರವರ ಎರಡೆಯ ಮಗ ಗೋವಿಂದಯ್ಯ ರವರ ಮಗ ಮೊದಲನೆ ಮಗ ಜವರೇಗೌಡರ ಹೆಂಡತಿಯ ಹೆಸರು ಹೊನ್ನಮ್ಮ, ಅವರಿಗೆ ಮೂರು ಜನ ಮಕ್ಕಳು, ಅವರ ಪೈಕಿ ಮೊದಲನೆಯವರು ಜಯಮ್ಮ, ಎರಡನೆಯವರು ಜಗದೀಶ(ನಾನು), ಮೂರನೆಯವರು ಗೀತ. ಗೋವಿಂದಯ್ಯ ರವರ ಎರಡನೆಯ ಮಗ ವೆಂಕಟರಾಮುರವರ ಹೆಂಡತಿಯ ಹೆಸರು ಲಕ್ಷ್ಮಮ್ಮ ಅವರಿಗೆ ಮೂರು ಜನ ಮಕ್ಕಳು, ಅವರ ಪೈಕಿ ಮೊದಲನೆಯವರು ಬೋಜ, ಎರಡನೆಯವರು ವಿಜಯಲಕ್ಷ್ಮಿ, ಮೂರನೆಯವರು ರವಿ.

ಮೇಲೆ ಹೇಳಿದ ನಮ್ಮ ಕುಟುಂಬದ ವಂಶವೃಕ್ಷವನ್ನು ನನ್ನ ವಕೀಲರಿಗೆ ಹೇಳಿ ಬರೆಸಿದ್ದೇನೆ. ಸರ್ವೆ ನಂ.45/2ಎ ರಲ್ಲಿ 2 ಎಕರೆ 9 ಗುಂಟೆ ಜಮೀನು, ಸರ್ವೆ ನಂ.45/2ಬಿ ರಲ್ಲಿ 25 ಗುಂಟೆ ಜಮೀನು ಮತ್ತು ಸರ್ವೆ ನಂ.45/4 ರಲ್ಲಿ 10 ಗುಂಟೆ ಜಮೀನುಗಳು ನಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದು ನಾನು ನನ್ನ ವಕೀಲರಿಗೆ ಹೇಳಿಲ್ಲ. ಸದರಿ ವಿಚಾರವನ್ನು ನನ್ನ ವಕೀಲರಿಗೆ ಹೇಳಲು ನನಗೆ ತೊಂದರೆ ಇತ್ತು. ತೊಂದರೆ ಏನಿತ್ತು ಎಂದರೆ ಹೊನ್ನಮ್ಮ ರವರು ನನಗೆ ನೋಟೀಸು ಕೊಟ್ಟಿದ್ದರು. ಈ ದಾವೆಯ ಪ್ರತಿವಾದಿ ಹೊನ್ನಮ್ಮ ರವರು ನನ್ನ ವಿರುದ್ದ ಅಸಲು ದಾವೆ ನಂ.226/2014 ರಂತೆ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಅರಕಲಗೂಡು ಇಲ್ಲಿ ಶಾಶ್ವತ ನಿರ್ಬಂದಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ 2014 ರಲ್ಲಿ ನೋಟೀಸು ಬಂದಿಲ್ಲ, 2015 ರಲ್ಲಿ ಜಾರಿ ಅರ್ಜಿಯ ಮೇಲೆ ನೋಟೀಸು ಬಂದಿದೆ.

ದಿಃ05-02-1960 ರಲ್ಲಿ ಗೋವಿಂದಯ್ಯ ಬಿನ್ ತಿಮ್ಮಯ್ಯ ರವರಿಗೆ ದಾಸೇಗೌಡನ ಮಗ ಗೋವಿಂದ, ಗೀತನ ಮಗ ಜವರ, ಎರಡನೇಯ ಮಗ ವೆಂಕಟರಾಮು, ಮೈನರ್ ಗಾರ್ಡಿಯನ್ ಆಗಿ ಗೋವಿಂದ ರವರು ಅರಕಲಗೂಡು ತಾಲ್ಲೂಕು ಮಾಚಗೌಡನ ಹಳ್ಳಿ ಸರ್ವೆ

ನಂ. 45/2 ರಲ್ಲಿ 1 ಎಕರೆ 17 ಗುಂಟೆ ಪೈಕಿ 28 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 08-02-1969 ರಲ್ಲಿ ದೇಸಿ ಉಃ ದಾಸೇಗೌಡರ ಮೊಮ್ಮಗ ಜವರೇಗೌಡ ದಾವಾ ಆಸ್ತಿಯನ್ನು ಗೋವಿಂದಯ್ಯನ ಹೆಂಡತಿ ಚಿಕ್ಕಹೊನ್ನಮ್ಮ ರವರಿಗೆ ಮರಾಟ ಮಾಡಿರುತ್ತಾರೆ. ಸದರಿ ಚಿಕ್ಕ ಹೊನ್ನಮ್ಮ ಈ ದಾವೆಯ ಪ್ರತಿವಾದಿ ಎಂದರೆ ಸರಿಯಲ್ಲ, ಸಾಕ್ಷಿಯ ಮುಂದುವರೆದು ನನ್ನ ತಂದೆಯ ತಾಯಿ ಚಿಕ್ಕಹೊನ್ನಮ್ಮ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಮೂಲ ಸರ್ವೆ ನಂ.45/2 ಇದರ ಒಟ್ಟು ವಿಸ್ತೀರ್ಣ 2 ಎಕರೆ 34 ಗುಂಟೆ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ.45/2ಎ ರಲ್ಲಿ 2 ಎಕರೆ 9 ಗುಂಟೆ, ಸರ್ವೆ ನಂ.45/2ಬಿ ರಲ್ಲಿ 25 ಗುಂಟೆ ಒಟ್ಟು ವಿಸ್ತೀರ್ಣ 2 ಎಕರೆ 34 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸವೆ ನಂ.45/4ರಲ್ಲಿ 10 ಗುಂಟೆ ಜಮೀನು ಇದೆ ಎಂದರೆ ಸರಿ.

ಸರ್ವೆ ನಂ.45/2ಎ ರಲ್ಲಿ 2 ಎಕರೆ 9 ಗುಂಟೆ ಜಮೀನು ಗೋವಿಂದ ಬಿನ್ ದೇಸಿ ರವರ ಹೆಸರಿನಲ್ಲಿದ್ದು ಅದರ ಪಹಣಿಯಲ್ಲಿನ ಅಂಶಗಳನ್ನು ಓದಿ ತಿಳಿಸಲಾಗಿದೆ ಸಾಕ್ಷಿಯು ಗೋವಿಂದ ನನ್ನ ತಾತ ಅವರ ಹೆಸರಿನಲ್ಲಿ 2 ಎಕರೆ 9 ಗುಂಟೆ ಜಮೀನು ಇದೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಪಹಣಿಯನ್ನು ನಿಡಿ-1 ಎಂದು ಗುರುತಿಸಲಾಯಿತು.

ಸರ್ವೆ ನಂ.45/4 ರಲ್ಲಿ 10 ಗುಂಟೆ ಜಮೀನು ಜವರ ಬಿನ್ ದಾಸಿ ತಿಮ್ಮಯ್ಯ ರವರ ಹೆಸರಿನಲ್ಲಿದ್ದು ಅದರ ಪಹಣಿಯಲ್ಲಿನ ಅಂಶಗಳನ್ನು ಓದಿ ತಿಳಿಸಲಾಗಿದೆ ಸಾಕ್ಷಿಯು ಜವರ ನನ್ನ ತಂದೆ ಅವರ ಹೆಸರಿನಲ್ಲಿ 10 ಗುಂಟೆ ಜಮೀನು ಇದೆ ಎಂದು ಹೇಳಿದ್ದರಿಂದ ಒಪ್ಪಿಕೊಂಡಿದ್ದರಿಂದ ಸದರಿ ಪಹಣಿಯನ್ನು ನಿಡಿ-2ಎಂದು ಗುರುತಿಸಲಾಯಿತು.

ನಮ್ಮ ಕುಟುಂಬದ ಮೂಲ ಪುರುಷ ದಾಸ ಉಃ ದೇಸಿ ರವರ ಮೊದಲನೆ ಮಗ ಅಣ್ಣೇಗೌಡ ಉಃ ಜವರ ರವರ ಹೆಸರಿನಲ್ಲಿ ಸರ್ವೆ ನಂ.45/4 ರ ಜಮೀನು ಇದೆ ಎಂದರೆ ಸರಿಯಲ್ಲ. ಅಣ್ಣೇಗೌಡರ ಮಗ ಜವರೇಗೌಡರ ಹೆಂಡತಿ ನಿಂಗಮ್ಮ ಮತ್ತು ಅವರ ಮಕ್ಕಳಾದ

ಲಕ್ಷಮ್ಮ ಮತ್ತು ರೇಣುಕಮ್ಮ ರವರು ನಮ್ಮ ಕುಟುಂಬದ ವಿರುದ್ದ ಅರಕಲಗೂಡಿನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಭಾಗಾಂಶ ಕೋರಿ ಅಸಲು ದಾವೆ ನಂ.353/2018 ರಂತೆ ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿಯು ಅವರಿಗೂ ಮತ್ತು ನಮಗೂ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನಗೆ ಸಮನ್ಸ್ ಬಂದಿಲ್ಲ. ಸದರಿ ದಾವೆಯನ್ನು ಹೂಡಿರುವ ವಿಚಾರ ನನಗೆ ಗೊತ್ತಿಲ್ಲ.

ಪ್ರತಿವಾದ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**